C.R.P.67

Form No.4 (Civil)
Deposition Sheets
(R.P.No.57)

## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

## ಎಸ್.ಸಿ. ನಂ.39/2021

ದಿನಾಂಕಃ 01.02.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ:8 ಪಿ. ಡಬ್ಲ್ಯೂ:8

| | |
|---|---|
| ಸಾಕ್ಷಿದಾರರ ಹೆಸರು | ಗಗನ್ |
| ತಂದೆಯ ಹೆಸರು | ವೆಂಕಟೇಶ್ |
| ವಯಸ್ಸು | 20 ವರ್ಷ |
| ಉದ್ಯೋಗ | ವಿದ್ಯಾರ್ಥಿ |
| ವಾಸ | ಗಾಂಧಿನಗರ, ಮಂಡ್ಯ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಸುಮಾರು 10 ವರ್ಷಗಳಿಂದ ನಾನು ಮೇಲೆ ಹೇಳಿರುವ ವಿಳಾಸದಲ್ಲಿ ವಾಸವಿದ್ದೇನೆ. ಮಂಡ್ಯದಲ್ಲಿ ಇರುವ ಮರಿಗೌಡ ಬಡಾವಣೆ ಗೊತ್ತು. ನಮ್ಮ ಗಾಂಧಿನಗರದಿಂದ, ಮರಿಗೌಡ ಬಡಾವಣೆಗೆ ಒಂದರಿಂದ ಒಂದುವರೆ ಕಿ.ಮಿ ದೂರ ಇದೆ. ನಾನು ಅನ್ನಪೂರ್ಣೇಶ್ವರಿ ನಗರದಲ್ಲಿ ಇರುವ ಹಸು ಫಾರಂ ನಲ್ಲಿ ಕೆಲಸ ಮಾಡುತ್ತಿದ್ದೆನು. ಫಾರಂನ ಒನರ್ ಮರಿಗೌಡ ಬಡಾವಣೆಯಲ್ಲಿಇದ್ದರು, ನಾನು ಬೀಗವನ್ನು ತೆಗೆದುಕೊಳ್ಳಲು ಮರಿಗೌಡ ಬಡಾವಣೆಗೆ ಒನರ್ ಮನೆಗೆ ಸುಮಾರು ಮದ್ಯಾಹ್ನ 1.45 ರಿಂದ 2.30 ಗಂಟೆ ಸಮಯದಲ್ಲಿ ಹೋಗಿದ್ದೆನು. ಬೀಗವನ್ನು ತೆಗೆದುಕೊಂಡು ಆಟೋ ಸ್ಟ್ಯಾಂಡ್ ಹತ್ತಿರ ನಡೆದುಕೊಂಡು ಬರುತ್ತಿರುವಾಗ , ಪೊಲೀಸರು ಇಲ್ಲಿ ಗಲಾಟೆ ಆಗಿದೆ, ಮಹಜರ್ ಗೆ ಬಾ ಅಂತ ಕರೆದರು. ಗಲಾಟೆಯಾಗಿದ್ದ ಜಾಗವು ಚಾಸಾ.1 ರವರ ಮನೆಯ ಮುಂದೆ ಇದ್ದ ಜಾಗವಾಗಿತ್ತು. ಸದರಿ ಜಾಗದಲ್ಲಿ ಚಾಸಾ.1, ಪೊಲೀಸರು, ಚಾಸಾ.3 ರಘು ಮತ್ತು ನಾನು ಇದ್ದೆವು. ಪೊಲೀಸರು ಘಟನಾ ಸ್ಥಳದಲ್ಲಿ ಇದ್ದ ಕುಡುಲು, ದೊಣ್ಣೆ, ಕಲ್ಲು ಮತ್ತು ಮಚ್ಚನ್ನು ತೆಗೆದುಕೊಂಡರು. ಚಾಸಾ.1 ರವರು ಈ ವಸ್ತುಗಳನ್ನು ಪೊಲೀಸರಿಗೆ ತೋರಿಸಿಕೊಟ್ಟರು. ಚಾಸಾ.1 ರವರಿಗೆ ತಲೆಗೆ , ಕಿವಿಗೆ, ಕೈಗಳಿಗೆ ಏಟಾಗಿತ್ತು. ಪೊಲೀಸರು ಘಟನಾ ಸ್ಥಳದಲ್ಲಿ ಬರವಣಿಗೆ ಮಾಡಿದರು.ಅದಕ್ಕೆ ನನ್ನ ಸಹಿಯನ್ನು ಹಾಕಿಸಿಕೊಂಡಿದ್ದರು, ಸದರಿ ನಿಪಿ.2 ಬರವಣಿಗೆಯನ್ನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ.2(ಸಿ)

ಎಂದು ಗುರುತಿಸಲಾಯಿತು. ನಿಪಿ.2 ಕ್ಕೆ ನಾನು ಮತ್ತು ರಘು ಸಹಿ ಮಾಡಿದೆನು. ಬೇರೆ ಯಾರು ಸಹಿ ಮಾಡಿದರು ಅಂತ ನೆನಪಿಲ್ಲ. ಸಹಿ ಮಾಡುವಾಗ ಸಮಯ ಮದ್ಯಾಹ್ನ 3.00 ರಿಂದ 3.30 ಗಂಟೆ ಆಗಿತ್ತು. ಮಹಜರ್ ಮಾಡಿದ ಸ್ಥಳದ ಸುತ್ತಾ ಮುತ್ತಾ ಚಾಸಾ.1 ಮತ್ತು ಇತರೆ ಮನೆಗಳು ಇತ್ತು . ನನಗೆ ತೋರಿಸಿದ ನಿಪಿ.3 ಮತ್ತು 4 ಫೋಟೋದಲ್ಲಿ ಕಲ್ಲು ಇದೆ. ನನಗೆ ತೋರಿಸಿದ ನಿಪಿ.5 ಮತ್ತು 6 ಫೋಟೋಗಳಲ್ಲಿ ಚಾಸಾ.1 ರವರ ಮನೆ ಇದೆ. ಸದರಿ ಫೋಟೋದಲ್ಲಿ ನಾನು, ಚಾಸಾ.1 ತಿರುಮಲ , ಚಾಸಾ.3 ರಘು ಮತ್ತು ಪೊಲೀಸರು ಇದ್ದೇವೆ. ಪೊಲೀಸರ ಹೆಸರು ಗೊತ್ತಿಲ್ಲ. ನನಗೆ ತೋರಿಸಿದ ನಿಪಿ.7 ಮತ್ತು 8 ಫೋಟೋಗಳಲ್ಲಿ ನಾನು, ಚಾಸಾ.1 ತಿರುಮಲ , ಚಾಸಾ.3 ರಘು ಮತ್ತು ಪೊಲೀಸರು ಇದ್ದೇವೆ. ನಿಪಿ.7 ಫೋಟೋದಲ್ಲಿ ಚಸಾ.1 ತಿರುಮಲ ರವರ ಕೈಯಲ್ಲಿ ಕುಡುಲು ಇದೆ. ನಿಪಿ.8 ಫೋಟೂದಲ್ಲಿ ಚಾಸಾ.1 ತಿರುಮಲ ರವರ ಕೈಯಲ್ಲಿ ದೊಣ್ಣೆ ಇದೆ. ನನಗೆ ತೋರಿಸಿದ ನಿಪಿ.9 ಮತ್ತು 10 ಫೋಟೋಗಳಲ್ಲಿ ನಾನು, ಚಾಸಾ.1 ತಿರುಮಲ , ಚಾಸಾ.3 ರಘು ಮತ್ತು ಪೊಲೀಸರು ಇದ್ದೇವೆ. ನಿಪಿ.9 ಫೋಟೋದಲ್ಲಿ ಚಾಸಾ.1 ತಿರುಮಲ , ಪೊಲೀಸರಿಗೆ ಕುಡಲನ್ನು ಕೊಡುತ್ತಿದ್ದಾರೆ . ನಿಪಿ.9 ಫೋಟೋದಲ್ಲಿ ಚಾಸಾ.10 ತಿರುಮಲ , ಪೊಲೀಸರಿಗೆ ದೊಣ್ಣೆಯನ್ನು ಕೊಡುತ್ತಿದ್ದಾರೆ .

ಶಂಕರ್ ಎಂಬುವರು, ಚಾಸಾ.1 ತಿರುವಲ ರವರ ತಂದೆಯ ತಲೆ ಮೇಲೆ ಕಲ್ಲನ್ನು ಎತ್ತಿ ಹಾಕಿದ್ದಾರೆ ಎಂದು ಗೊತ್ತಾಯಿತು. ಪೊಲೀಸರು ಮಹಜರ್ ಸಮಯದಲ್ಲಿ ಘಟನಾ ಸ್ಥಳದಿಂದ ತೆಗೆದುಕೊಂಡಿದ್ದ ಕುಡುಲು, ದೊಣ್ಣೆ, ಕಲ್ಲು ಮತ್ತು ಮಚ್ಚನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 6 ನ್ನು ನೋಡಿ ಗುರುತಿಸಿದ್ದಾರೆ. ಮು.ಮಾ.1 ರಿಂದ 5 ವಸ್ತುಗಳ ಬಗ್ಗೆ ಚಾಸಾ.1 , ಪೊಲೀಸರಿಗೆ ಏನು ಮಾಹಿತಿಯನ್ನು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಚಾಸಾ.1 ರವರಿಗೆ ಯಾವ ವಸ್ತುವಿನಿಂದ ಏಟಾಗಿತ್ತು ಅಂತ ನನಗೆ ಗೊತ್ತಾಗಲಿಲ್ಲ. ಅದೇ ದಿವಸ ರಾತ್ರಿ 9.30 ರಿಂದ 9.45 ಗಂಟೆಯಲ್ಲಿ ಪೊಲೀಸರು ನನನಗೆ ಫೋನ್ ಮಾಡಿ ಠಾಣೆಗೆ ಕರೆಸಿಕೊಂಡರು. ನಾನು ಪೊಲೀಸ್ ಠಾಣೆಗೆ ಹೋದೆನು. ಪೊಲೀಸ್ ಠಾಣೆಯಲ್ಲಿ 2 ನೇ ಆರೋಪಿ ಶ್ರೀನಿಧಿ ಪ್ಯಾಂಟನ್ನು ಕೊಟ್ಟರು. ಠಾಣೆಯಲ್ಲಿ ಪೊಲೀಸರು 2 ನೇ ಆರೋಪಿ ಶ್ರೀನಿಧಿ ರವರಿಂದ ಪ್ಯಾಂಟಂನ್ನು ಪಡೆದುಕೊಂಡರು. ಹೆೊಡೆದಾಟ ಆಗಿದ್ದಾಗ ಇದೇ ಪ್ಯಾಂಟ್ ಇತ್ತು ಅಂತ ಹೇಳಿ 2 ನೇ ಆರೋಪಿ ಶ್ರೀನಿಧಿ ಕೊಟ್ಟರು. ಸದರಿ ಪ್ಯಾಂಟ್ ನೀಲಿ ಬಣ್ಣದ ನೈಟ್ ಪ್ಯಾಂಟ್ ಆಗಿತ್ತು. ಪೊಲೀಸರು ಇವುಗಳನ್ನು ಪಡೆದುಕೊಂಡಿದಕ್ಕೆ ನನ್ನ ಸಹಿಯನ್ನು ಹಾಕಿಸಿಕೊಂಡರು. ಚಾಸಾ.3 ರಘು ಮತ್ತು ಪೊಲೀಸ್ ನವರು ಆ ಸಮಯದಲ್ಲಿ ಇದ್ದರು. ಸುಮಾರು ರಾತ್ರಿ 11.30 ಗಂಟವರೆಗೆ ಪೊಲೀಸರ್ ಠಾಣೆಯಲ್ಲಿ ಇದ್ದೆನ. ಈಗ ನನಗೆ ತೋರಿಸಿದ ನಿಪಿ.19 ಮಹಜರ್ ನಲ್ಲಿ

ನನ್ನ ಸಹಿ ಇದ್ದು, ಅದನ್ನು ನಿಪಿ.19(ಬಿ) ಎಂದು ಗುರುತಿಸಲಾಯಿತು. ಪ್ಯಾಂಟನ್ನು ಈಗ ನೋಡಿದರೆ ಗುರುತಿಸುತ್ತ್ೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.12 ಪ್ಯಾಂಟನ್ನು ನೋಡಿ ಗುರುತಿಸಿದ್ದಾರೆ. ಮು.ಮಾ.12 ಪ್ಯಾಂಟ್ ಹಾಕಿರುವ ಬಿಳಿ ಚೀಲದ ಮೇಲೆ ಅಂಟಿಸಿರುವ ಚೀಟಯಲಲ್ಲಿ ನನ್ನ ಸಹಿ ಇದೆ. ಅದನ್ನು ಮು.ಮಾ.12(ಎ) ಎಂದು ಗುರುತಿಸಲಾಯಿತು.

ಠಾಣೆಯಲ್ಲಿ ಇದ್ದ ಶ್ರೀನಿಧಿಯನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿ ಶ್ರೀನಿಧಿಯನ್ನು ನೋಡಿ ಗುರುತಿಸಿದ್ದಾರೆ. ಈಗ ನನಗೆ ತೋರಿಸಿದ 4 ಫೋಟೋಗಳಲ್ಲಿ ನಾನು, 2 ನೇ ಆರೋಪಿ ಶ್ರೀನಿಧಿ, ಚಾಸಾ.3 ರಘು ಮತ್ತು ಪೊಲೀಸರ್ ನವರು ಇದ್ದೇವೆ. ಸದರಿ ಫೋಟೋಗಳನ್ನು ನಿಪಿ.23 ರಿಂದ 26 ಎಂದು ಗುುರುತಿಸಲಾಯಿತು.

ಮಾರನೆಯ ದಿವಸ ಪೊಲೀಸರು, ಮದ್ಯಾಹ್ನ 1.45 ರಿಂದ 2.00 ಗಂಟೆ ಅವಧಿಯಲ್ಲಿ ಪೊಲೀಸ್ ಠಾಣೆಗೆ ನನ್ನನ್ನು ಕರೆಸಿಕೊಂಡಿದ್ದರು. ಇನ್ನೊಬ್ಬರಿಂದ ಪ್ಯಾಂಟನ್ನು ಪಡೆದುಕೊಳ್ಳುತ್ತಿದ್ದೇವೆ ಬನ್ನಿ ಅಂತ ಕರೆಸಿಕೊಂಡಿದ್ದರು. ಇನ್ನೊಬ್ಬರ ಹೆಸರು ಶಂಕರ ಎಂದು ಹೇಳಿದರು. ನಾನು ಮದ್ಯಾಹ್ನ 1.45 ರಿಂದ 2.00 ಗಂಟೆ ಅವಧಿಯಲ್ಲಿ ಪೊಲೀಸ್ ಠಾಣೆಗೆ ಹೋದೆನು. ಠಾಣೆಯಲ್ಲಿ ನಾನು, ಚಾಸಾ.3 ರಘು, ಪೊಲೀಸರು, ಶಂಕರ ಇದ್ದೆವು. ನಾನು ಪೊಲೀಸ್ ಠಾಣೆಯಲ್ಲಿ ಸುಮಾರು 3.15 ರಿಂದ 3.45 ಗಂಟೆವರೆಗೆ ಇದ್ದೆನು. ಪೊಲೀಸರು ಶಂಕರ್ ರವರಿಂದ ಪ್ಯಾಂಟನ್ನು ಪಡೆದುಕೊಂಡರು. ಶಂಕರ್ ರವರು, ಗಲಾಟೆಯಾಗಿದ್ದ ಇದೇ ಪ್ಯಾಂಟನ್ನು ಹಾಕಿಕೊಂಡಿದ್ದೆ ಅಂತ ಮಾಹಿತಿಯನ್ನು ಕೊಟ್ಟರು. ಸಿಮೆಂಟ್ ಬಣ್ಣದ ಕಾಟನ್ ಪ್ಯಾಂಟ್ ಆಗಿತ್ತು. ಅದನ್ನು ನೋಡಿದರೆ ಗುರುತಿಸುತ್ತ್ೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.14 ಪ್ಯಾಂಟನ್ನು ನೋಡಿ ಗುರುತಿಸಿದ್ದಾರೆ. ಸದರಿ ಪ್ಯಾಂಟ್ ಇರುವ ಚೀಲದ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಮು.ಮಾ.14(ಎ) ಎಂದು ಗುರುತಿಸಲಾಯಿತು. ಪ್ಯಾಂಟನ್ನು ತೆಗೆದುಕೊಂಡು ಪೊಲೀಸರು ನನ್ನ ಮತ್ತು ಚಾಸಾ.3 ರವರ ಸಹಿಯನ್ನು ಮಹಜರ್ ಗೆ ಹಾಕಿಸಿಕೊಂಡರು. ಈಗ ನನಗೆ ತೋರಿಸಿದ ನಿಪಿ.20 ಮಹಜರ್ ನಲ್ಲಿ ನನ್ನ ಸಹಿ ಇದ್ದು, ಅದನ್ನು ನಿಪಿ.20(ಬಿ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ 4 ಫೋಟೋಗಳಲ್ಲಿ ನಾನು, ಚಾಸಾ.3 ರಘು, ಪೊಲೀಸರು ಮತ್ತು ಶಂಕರ್ ಇದ್ದೇವೆ. ಸದರಿ 4 ಫೋಟೋಗಳನ್ನು ನಿಪಿ.27 ರಿಂದ 30 ಎಂದು

ಗುರುತಿಸಲಾಯಿತು. ಶಂಕರ್ ರವರನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ಶಂಕರ್ ಅನ್ನು ನೋಡಿ ಗುರುತಿಸಿರುತ್ತಾರೆ. ಶಂಕರ್ ಎಂಬ ವ್ಯಕ್ತಿ ಈ ದಿವಸ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ. ನನಗೆ ತೋರಿಸಿದ 3 ಪೊಲೀಸ್ ನೋಟೀಸ್ ಗಳಲ್ಲಿ ನನ್ನ ಸಹಿ ಇರುತ್ತದೆ. ಸದರಿ ನೋಟೀಸ್ ಗಳನ್ನು ಅನುಕ್ರಮವಾಗಿ ನಿಪಿ.31 ರಿಂದ 33 ಎಂದು ಗುರುತಿಸಲಾಯಿತು. ಹಾಗೂ ಅದರಲ್ಲಿ ಇರುವ ನನ್ನ 3 ರುಜುಗಳನ್ನು ನಿಪಿ.31(ಎ), ನಿಪಿ.32(ಎ) ಮತ್ತು ನಿಪಿ.33(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ ಹೆಚ್.ಪಿ.ಎಂ. ವಕೀಲರು, ಅವರ ಹಿರಿಯ ವಕೀಲರು ಅನಾರೋಗ್ಯ ಇರುವ ಕಾರಣ ಬೆಂಗಳೂರಿನಿಂದ ಬರಲು ಸಾಧ್ಯವಾಗಿರುವುದಲ್ಲ ಎಂಬ ಕಾರಣವನ್ನು ನೀಡಿ ಪಾಟೀ ಸವಾಲಿಗೆ ಸಮಯವನ್ನು ಕೋರಿರುತಾರೆ, ನೀಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.